





ಸಣ್ಣ ಮಾಡಿಕೊಂಡು ಹೊಸ ವಿನ್ಯಾಸದ್ದೂ ಇವೆ. ಇದಕ್ಕೆ ಬಂಗಾರ ಕಡಿಮೆ ಸಾಕು. ಹಿಂಬದಿಯೂ ಕಾಣುವುದಿಲ್ಲ. ಹಾಗಾಗಿ ಅಲಂಕಾರದಲ್ಲಿ ಸುಂದರತೆಯಲ್ಲಿ ಏನೂ ಕೊರತೆಯಾಗುವುದಿಲ್ಲ.

ಸರದ ಮಧ್ಯದಲ್ಲಿ ಒಂದೇ ಗಾತ್ರದ 2 ಗುಂಡುಗಳು ಇದ್ದರೆ ಅದರ ಮಧ್ಯಕ್ಕೆ ಪೆಂಡೆಂಟ್ ಧರಿಸಬಹುದು. ಬಾಲಾಜಿ ಹುಕ್ ಇದ್ದರೆ ಮಾತ್ರ ಇಲ್ಲದಿದ್ದರೆ ಸರವನ್ನು ಪೋಣಿಸುವಾಗಲೇ ಪೆಂಡೆಂಟ್ ಅನ್ನು ಜೋಡಿಸಬೇಕು. ಆಗ ಇದನ್ನು ಪ್ರತ್ಯೇಕಿಸಲು ಸಾಧ್ಯವಿಲ್ಲ. ಓವಲ್ ಆಕಾರದ ಗುಂಡುಗಳೂ ಇವೆ. ಇವೂ ಎರಡು ಎಳೆ ಸರಕ್ಕೆ ಸೂಕ್ತವಾಗಿದೆ. ಇವು 'ಕೊಡಗಿನ ಜೋಮಾಲೆ' ಎಂದೇ ಸುಪ್ರಸಿದ್ಧ.

ಇದು ಎರಡೂ ಬದಿ ಚೂಪಾದ ಗುಂಡು ಶೇಪ್. ಇದರ ತುದಿಗಳು ಚೂಪಾಗಿದ್ದು ಎರಡು ಸುತ್ತಿನ ಹಾರಕ್ಕೆ ಬಹಳ ಸುಂದರವಾಗಿ ಕಾಣುತ್ತದೆ. ಇದರಲ್ಲೂ ವ್ಯಾಕ್ಸ್ ತುಂಬಿದ್ದು ಭದ್ರವಾಗಿರುತ್ತದೆ. ಇದರ ಮೇಲೂ ಕೆತ್ತನೆ ಇದ್ದರೆ ಹೊಳಪು ಇರುತ್ತದೆ. ಕೆತ್ತನೆ ಇಲ್ಲವಾದಲ್ಲಿ ಮೋಡ್ ಫಿನಿಶ್ ಲುಕ್ ಕೊಡುತ್ತದೆ. ಈ ಗುಂಡುಗಳ ಜೊತೆಗೆ ಚಿಕ್ಕದಾದ ಮುತ್ತು, ಚಿನ್ನದ ಕೊತ್ತಂಬರಿ ಗುಂಡುಗಳನ್ನೂ ಪೋಣಿಸಿ ಸರ ಮಾಡಬಹುದು. ಇದು ಹೊಸ ಮೆರುಗನ್ನು ಕೊಡುತ್ತದೆ. ಇದಕ್ಕೆ 'ಚೋಮ್ರಾಳ' ಸರ ಎಂದು ಕರೆಯುತ್ತಾರೆ. ಇದು ಉತ್ತರ ಕರ್ನಾಟಕದಲ್ಲೂ ಬಳಕೆಯಲ್ಲಿದೆ.

ಸಾಧಾರಣವಾಗಿ ವ್ಯಾಕ್ಸ್ ತುಂಬಿರುವ ಗುಂಡುಗಳಿಗೆ ಕಡಿಮೆ ಚಿನ್ನ ಸಾಕು. ಆದರೆ ಸಾಲಿಡ್ ಗುಂಡುಗಳೂ ಬಳಕೆಯಲ್ಲಿದೆ. ಆಭರಣವನ್ನು ಜಾಗರೂಕತೆಯಿಂದ ನೋಡಿಕೊಳ್ಳುವವರು ಯಾವುದನ್ನಾದರೂ ಖರೀದಿಸಿ ಧರಿಸಬಹುದು. ದಕ್ಷಿಣ ಭಾರತದ ಗುಂಡುಗಳನ್ನು ಬಳಕೆಯಲ್ಲಿ 'ಸರಿಗೆ' ಗುಂಡು ಎಂದು ಕರೆಯುತ್ತಾರೆ. ಸಾಧಾರಣವಾಗಿ ಚಿನ್ನದ ಸರಿಗೆಯಲ್ಲಿ ಗುಂಡುಗಳನ್ನು ಪೋಣಿಸಿ ಹಾರ ತಯಾರಿಸಲಾಗುತ್ತದೆ. ಆದಷ್ಟು ಗುಂಡುಗಳ ಒಳಗೂ ಚಿನ್ನವೇ ತುಂಬಿದ್ದಾಗ ಅದು ಬಹಳ ಭಾರವಾಗಿರುತ್ತದೆ. ಗುಂಡುಗಳ ಸರ ಸಾಧಾರಣವಾಗಿ ವ್ಯಾಕ್ಸ್ ತುಂಬಿದ ಗುಂಡುಗಳನ್ನು ಚಿನ್ನದಲ್ಲೂ, ಗುಂಡು ಸರಿಗೆಯನ್ನು ಬಳಸಿ ಪೋಣಿಸಿಯೂ ಧರಿಸುತ್ತಾರೆ. ಬಣ್ಣ ಬಣ್ಣದ ನೂಲಿನಲ್ಲೂ ಪೋಣಿಸಿ ಧರಿಸುತ್ತಾರೆ. ಈಗ ಚಿನ್ನದ ಬಣ್ಣದ ನೂಲಿನಲ್ಲೂ ಹಣೆಯುತ್ತಾರೆ. ಅದು ಚಿನ್ನದಲ್ಲೇ ಪೋಣಿಸಿದಂತೆ ಕಾಣುತ್ತದೆ. ದೂರದಿಂದ ಬಹಳ ಹೊಳೆಯುತ್ತದೆ, ಆಕರ್ಷಕವಾಗಿರುತ್ತದೆ.

ನೂಲಿನಲ್ಲಿ ಹಣೆಯುವಾಗಲೂ ಎರಡು ಗಂಟು, ಮೂರು ಗಂಟು, ನಾಲ್ಕು ಗಂಟು.. ಹೀಗೆ ಹಲವಾರು ತರದಲ್ಲಿ ಇವೆ. ಅವು ಬೇರೆ ಬೇರೆ ಲುಕ್ ಕೊಡುತ್ತದೆ. ಗಂಟುಗಳಲ್ಲದೆ ನಾಲ್ಕು ಎಳೆ ಜಡೆ ಹಣೆದಂತೆಯೂ ಇರುವುದು. ಮಧ್ಯ ಮಧ್ಯ ಗುಂಡುಗಳು ಇದ್ದಾಗ ಬಹಳ ಸುಂದರ ನೋಟವಿರುತ್ತದೆ. ನಾಲ್ಕು ಗ್ರಾಂಗಳಲ್ಲೂ ಕೂಡ ಸರ ಮಾಡಬಹುದು. ನೂಲಿನ ಕಟ್ಟು, ನೈಗೆಗಳನ್ನು ಜಾಸ್ತಿ ಮಾಡಿದರಾಯಿತು. ಸೀರೆಗೆ, ಉಡುಪುಗಳಿಗೆ ಹೊಂದುವ ಬಣ್ಣದ ನೂಲನ್ನು ಆಯ್ದುಕೊಂಡು ಸರವನ್ನು ಧರಿಸಬೇಕು. ಆಗ ಒಳ್ಳೆಯ ಲುಕ್ ಬರುತ್ತದೆ. ನೂಲು ಹಳತಾದಂತೆ ಬದಲಿಸಬೇಕು. ಸ್ನಾನ ಮಾಡುವಾಗ, ಆಟ ಆಡುವಾಗ, ಮನೆ ಕೆಲಸ ಮಾಡುವಾಗ ಧರಿಸದೆ ಸಮಾರಂಭಗಳಿಗೆ ಹೋಗುವಾಗ ಮಾತ್ರ ಧರಿಸಿ ಬಂದ ಕೂಡಲೇ ತೆಗೆದಿರಿಸಿದರೆ ಎಷ್ಟು ವರುಷಗಳಾದರೂ ನೂಲು ತುಂಡಾಗುವುದಿಲ್ಲ. ಧರಿಸದೇ ಇದ್ದಲ್ಲಿ ನೂಲಿನ ಬಣ್ಣ ಮಾಸಿಹೋಗುತ್ತದೆ. ಜೊತೆಯಲ್ಲಿ ಹಳತಾಗಿ ಪುಡಿ ಪುಡಿಯಾಗುತ್ತದೆ. ಹಾಗಾಗಿ ಆಗಾಗ ಗಾಳಿಯಾಡುತ್ತಾ ಇದ್ದರೆ ಆಭರಣ ಚೆನ್ನಾಗಿರುತ್ತದೆ.